

ಎಡದಿಂದ ಬಲಕ್ಕೆ:
1. ಕೋವಿ ಹಿಡಿದವರ ಮನೆಯಲ್ಲಿ ಶ್ರೇಷ್ಠ ಪದ್ಯ ಸಾಹಿತಿ (4)
3. ರಾಕ್ಷಸನಾದರೂ ಓದು–ಬರಹ ಬಲ್ಲವ (3)
4. ಜವಾನನ ಬೆನ್ನ ಮೇಲೆ ಎಂಥ ಭಾರ! (3)
6. ವಾರಿಧಿ ಕಾಣಬೇಕೆಂದರೆ ಸೂರ್ಯ ಮೂಡಬೇಕು (4)
7. ಮಂಕು ಜನರ ನಡುವೆ ಎಂಥ ಭಾರೀ ಮೊಸಳೆ! (3)
9. ಉಕ್ಕುವ ನೀರಿನ ಸುತ್ತ ಬರೀ ಮರಳು (3)
11. ತಾವು ಅರಿತದ್ದನ್ನೆಲ್ಲ ತಿಳಿಸುವ ಕೆಲಸ– ಬೇಗ (3)
13. ಕರೆಯುತ್ತೇನೆಂದರೆ ಹೀಗೆ ಬೇಡ ಎನ್ನುವುದೇ? (3)
15. ಹೊಸ ಹಕ್ಕಿಯಂತಿದೆ ಬಿಳುಪಿನ ಜಲ ಹಕ್ಕಿ (4)
17. ತಪ್ಪು ನೆಪ್ಪುಗಳನ್ನೆಲ್ಲ ತ್ಯಜಿಸಿ ಪವಿತ್ರನಾದ (3)
18. ಪುಟ್ಟ ಗಂಟನ್ನೇ ಆಯ್ದುಕೊಂಡ ಭಾರೀ ತುಂಟ (3)
19. ಕತ್ತಲ ಬಣ್ಣದ್ದು, ದಾರಕ್ಕೆ ಪೋಣಿಸುವಂಥದ್ದು (4)

ಮೇಲಿಂದ ಕೆಳಕ್ಕೆ:
1. ಓದಿದ್ದರ ಕುರಿತು ಸಂಪೂರ್ಣ ಲಿಖಿತ ವಿವರ (3)
2. ಅವರಿವರ ಕೆಲಸದ ಬಗೆಗೆ ವಿಸ್ತೃತ ಮಾಹಿತಿ (3)
3. ಅಸಾಧ್ಯ ಕೆಲಸ ಮಾಡು ಮುಗಿಸಿದವ (3)
5. ನಡೆಸಿದ್ದು ಆಯಿತು, ಮಾತಾಡುವಂತೆ ಮಾಡು (3)
7. ಹತ್ತೂ ಜನರ ಮಾತಿಗೂ ಅಲ್ಲಿ ಪ್ರಾಮುಖ್ಯ (3)
8. ಚರ್ಚಿತ ಅಂಶಗಳನ್ನೆಲ್ಲ ಬಳಸಿ ನಿರ್ಮಿಸಿದ್ದು? (3)
9. ಉತ್ಖನನ ಮಾಡಿದ ನಂತರ ಉದಯವಾದೀತು (3)
10. ಬೇರೇನು ಬೇಕು? ಧನ ದೇವತೆಯೇ ಬಂದ (3)
12. ಪುಕಾರು ಏನೇ ಇರಲಿ, ಕುದುರೆ ಏರುವ ಮೆಟ್ಟಿಲು ಎಲ್ಲಿ? (3)
14. ಕಳ್ಳರ ಗುಂಪುಗಳಲ್ಲೇ ಭಾರೀ ಹೋರಾಟ (3)
15. ಹೂತು ಹಾಕಿದವನೇ ಕೊಲೆಗಾರ ಕೂಡ (3)
16. ಪಕ್ಷಿಯೇ ತಿರುಗಿದಂತೆ ಹಾರುವ ಅಸ್ತ್ರ ಕಾಣಿರಾ? (3)

## 03–7–14ರ ಉತ್ತರಗಳು

ಎಡದಿಂದ ಬಲಕ್ಕೆ:
1. ಸಂಹಾರ; 3. ಅಂಕುಡೊಂಕು; 4. ಸಾಲಂಕೃತ; 6. ತಲ್ಲೀನ; 7. ಗಾಳಿವಿಧ; 9. ಅಬ್ಬರಿಸು; 11. ಕರಣಿಕ; 13. ನಿರಶನ; 15. ಕಾಡಿಗೆ; 17. ಶತಾವರಿ; 18. ತಹಬಂದಿ; 19. ಸುಜನ.

ಮೇಲಿಂದ ಕೆಳಕ್ಕೆ:
1. ಸಂಕುಚಿತ; 2. ರಸಾಯನ; 3. ಅಂಜುಗುಳಿ; 5. ತರಾವರಿ; 7. ಗಾಯಕ; 8. ಧನಿಕ; 9. ಅವನಿ; 10. ಸುಮ್ಮಾನ; 12. ರಜನೀಶ; 14. ಶತಪದಿ; 15. ಕಾದಿರಿಸು; 16. ಗೆಳೆತನ.

# ಬಿಳಿ ಸಿಂಹ – ಏನು ವಿಶೇಷ?

ವಿಶೇಷ ಏನೇ ಇರಲಿ, ಬಿಳಿ ಸಿಂಹ ಪ್ರತ್ಯೇಕ ಸಿಂಹ ಪ್ರಭೇದವಂತೂ ಅಲ್ಲ. ಸಿಂಹಗಳ ಎರಡು ಉಪ ಪ್ರಭೇದಗಳಾದ 'ಆಫ್ರಿಕನ್ ಸಿಂಹ' ಮತ್ತು 'ಏಷಿಯನ್ ಸಿಂಹ'ಗಳಲ್ಲಿ ಆಫ್ರಿಕನ್ ಸಿಂಹದ್ದೇ ಮತ್ತೊಂದು ಉಪ ಪ್ರಭೇದ 'ಪ್ಯಾಂಥೆರಾ ಲಿಯೋ ಕ್ರೂಗೆರಾ' ಗುಂಪಿಗೇ ಶ್ವೇತ ಸಿಂಹಗಳು ಸೇರಿವೆ. ಸ್ಪಷ್ಟವಾಗಿಯೇ ಬಿಳಿ ಸಿಂಹ (ಚಿತ್ರ–2) ಇತರ ಸಿಂಹಗಳಿಂದ ಜೈವಿಕವಾಗಿ ಕಿಂಚಿತ್ತೂ ಭಿನ್ನ ಅಲ್ಲ. ಅವುಗಳ ಬೆಳ್ಳನ್ನ ಬಣ್ಣದಿಂದಾಗಿ ಅವು ವಿಶೇಷವಾಗಿ ಗಮನ ಸೆಳೆಯುತ್ತವೆ; ಇದೇ ವಿಶೇಷತೆಯಿಂದಲೇ 'ಅನ್ಯಲೋಕದ ಪ್ರಾಣಿ'ಯಂತೆ ಕಂಡು ಬೇಟೆಗಾರ ಮನುಷ್ಯರಿಗೆ ಬಲಿಯಾಗಿ ಪ್ರಸ್ತುತ ಅತ್ಯಲ್ಪ ಸಂಖ್ಯೆಯಲ್ಲಿ ಉಳಿದಿವೆ. ಕೇವಲ ದಕ್ಷಿಣ ಆಫ್ರಿಕಾದ ಅಭಯಾರಣ್ಯದಲ್ಲಿ ಮತ್ತು ಹಲವಾರು ರಾಷ್ಟ್ರಗಳ ಮೃಗಾಲಯಗಳಲ್ಲಿ ಕಾಣಬಹುದಾದ ಶ್ವೇತ ಸಿಂಹಗಳ ಒಟ್ಟು ಸಂಖ್ಯೆ ಎರಡು–ಮೂರು ನೂರರ ನಡುವೆಯೇ ಉಳಿದು ನಿಂತಿದೆ ಅಷ್ಟೆ!

ವಾಸ್ತವವಾಗಿ ಮೂಲತಃ ಸೃಷ್ಟಿಗೊಂಡ ಕಾಲದಿಂದಲೂ ಎಲ್ಲ ಸಿಂಹಗಳದೂ ಒಂದೇ ಮೈಬಣ್ಣ; ಈಗಿನ ಎರಡೂ ಪ್ರಧಾನ ಉಪ ಪ್ರಭೇದಗಳಂತೆ ಒಣಹುಲ್ಲಿನ ಬಣ್ಣ. ಆದಿಕಾಲದಿಂದಲೂ ಸಿಂಹಗಳ ಪ್ರಮುಖ ನೈಸರ್ಗಿಕ ವಾಸಕ್ಷೇತ್ರವಾದ ಹುಲ್ಲುಗಾವಲುಗಳಲ್ಲಿ, ಹುಲ್ಲು ಗಿಡಗಳ ನಡುವೆ ಬಲಿಪ್ರಾಣಿಗಳ ದೃಷ್ಟಿಗೆ ಅಗೋಚರವಾಗಿ ಉಳಿಯಲು, ಸುಲಭವಾಗಿ ಯಶಸ್ವಿಯಾಗಿ ಬೇಟೆಯಾಡಲು ನೆರವಾಗಲೆಂದು ಈ ಬಣ್ಣ ಸಿಂಹಗಳಿಗೆ ನಿಸರ್ಗದತ್ತ.

ಆದರೆ ಭೂ ಇತಿಹಾಸದಲ್ಲಿ ಈಗ್ಗೆ ಸಮೀಪ ಇಪ್ಪತ್ತು ಸಾವಿರ ವರ್ಷ ಹಿಂದಿನ



'ಹಿಮಯುಗ'ದಲ್ಲಿ ಭೂಮಿಯ ಬಹುಭಾಗ ಹಿಮಾವೃತವಾಗಿತ್ತು (ಚಿತ್ರ–1); ಆಗಿನ ಸಿಂಹಗಳ ಆವಾಸದ ಕೆಲ ಪ್ರದೇಶಗಳೂ ಕೂಡ. ಹಾಗಾದಾಗ ಬೆಳ್ಳನೆಯ ಹಿನ್ನೆಲೆಯಲ್ಲಿ ಎದ್ದು ಕಾಣುವಂತಾಗಿ ಸಿಂಹಗಳು ಆಹಾರ ಗಳಿಸುವುದು ದುಸ್ಸಾಧ್ಯವಾಗಿತ್ತು. ಆಗ ಅಂಥ ಪ್ರದೇಶಗಳಲ್ಲಿದ್ದ ಸಿಂಹಗಳಲ್ಲಿ ಲಘು ಸ್ವರೂಪದ ಒಂದು ಜೈವಿಕ ಮಾರ್ಪಾಡು ಒಡಮೂಡಿತು. ತತ್ಪರಿಣಾಮವಾಗಿ ಚರ್ಮಕ್ಕೆ ವರ್ಣ ಒದಗಿಸುವ 'ಮೆಲಾನಿನ್'ನ ಉತ್ಪಾದನೆ ಭಾಗಶಃ ಕಡಿಮೆಯಾಗಿ ಅಂಥ ಸಿಂಹಗಳು ಶ್ವೇತ ವರ್ಣ ಗಳಿಸಿದುವು; ಹಿಮಹಾಸಿನ ಮೇಲೆ ಸುಲಭ ಗೋಚರವಾಗದ ರೂಪ ಪಡೆದುವು.

ಈಗ್ಗೆ ಕೆಲವು ಸಾವಿರ ವರ್ಷಗಳ ಹಿಂದೆ ಹಿಮಯುಗ ಮುಗಿದು ಹಿಮಹಾಸುಗಳೆಲ್ಲ ಹಿಂಸರಿದು ಅಲ್ಲೆಲ್ಲ ಅಡವಿ–ಹುಲ್ಲುಬಯಲುಗಳು ಮತ್ತೆ ಮೈದಳೆದಾಗ ಶ್ವೇತ ಸಿಂಹಗಳು ಮತ್ತೆ ಸಂಕಷ್ಟಕ್ಕೆ ಸಿಲುಕಿ ಅವುಗಳ ಸಂಖ್ಯೆ ಕುಸಿಯತೊಡಗಿತು. ಜೊತೆಗೆ ಆ ವೇಳೆಗೆ ಕಾಲಿಟ್ಟ ಶಸ್ತ್ರಧಾರೀ ಆಧುನಿಕ ಮಾನವರ ಹಾವಳಿಯೂ ಸೇರಿ ಶ್ವೇತ ಸಿಂಹಗಳ ಸಂಖ್ಯೆ ಈಗಿನ ಬೆರಳೆಣಿಕೆಯಷ್ಟಕ್ಕೆ ತಲುಪಿತು.

■ ಎನ್. ವಾಸುದೇವ್